SAMYUKTHA KARNATAKA BANGALORE
DATED: 10th SEPTEMBER 99

# ಬಂಜೆತನಕ್ಕೆ ಸಾಂಪ್ರದಾಯಿಕ ಚಿಕಿತ್ಸೆ

ಬೆಂಗಳೂರು, ಸೆ. 9- ಸಾಂಪ್ರದಾಯಿಕ ಚಿಕಿತ್ಸಾ ವಿಧಾನಗಳ ಮೂಲಕ ಜನಪ್ರಿಯವಾಗಿರುವ ಆತ್ರೇಯಾ ಸಂಸ್ಥೆಯು ಇದೇ ಸೆ. 12 ರಿಂದ ಸೆ. 18 ರವರೆಗೆ ಬಂಜೆತನದ ಕುರಿತಾಗಿ ವೈದ್ಯಕೀಯ ಸಲಹೆ ಹಾಗೂ ಚಿಕಿತ್ಸೆಯನ್ನು ನೀಡಲಿದೆ.

ಭಾರತದಲ್ಲಿ ಶೇ. 15ರಷ್ಟು ವಿವಾಹಿತ ದಂಪತಿಗಳು ಬಂಜೆತನದ ಸಮಸ್ಯೆಯಿಂದ ಬಳಲುತ್ತಿದ್ದಾರೆ. ಇದರಿಂದಾಗಿ ಮಾನಸಿಕ ಯಾತನೆ ಅನುಭವಿಸುವ ದಂಪತಿಗಳು, ಸಮಾಜದ ತಿರಸ್ಕಾರಕ್ಕೆ ಪಾತ್ರರಾಗುವ ಅಪಾಯವೂ ಇದೆ.

ಹೀಗಾಗಿ ಈ ಸಮಸ್ಯೆಯ ಬಗ್ಗೆ ಯಾರೊಡನೆಯೂ ಹೇಳಿಕೊಳ್ಳದೆ ಒದ್ದಾಡುವ ಅನೇಕ ಮಂದಿ ಇದ್ದಾರೆ.

ಈ ನಿಟ್ಟಿನಲ್ಲಿ ಆತ್ರೇಯಾ ಸಂಸ್ಥೆಯು ದಂಪತಿಗಳಿಗೆ ನೆರವಾಗುವಂತೆ ಡಾ. ಮಾಧವ್ ಡಿಗ್ಗವಿ ಅವರ ನೇತೃತ್ವದಲ್ಲಿ ಬಂಜೆತನಕ್ಕೆ ಚಿಕಿತ್ಸೆ ನೀಡಲು ವಿಶೇಷ ಸಪ್ತಾಹವನ್ನು ಹಮ್ಮಿಕೊಂಡಿದೆ.

ಸೆ. 12ರಂದು ದಂಪತಿಗಳಿಗೆ ವೈದ್ಯಕೀಯ ಸಲಹೆ ನೀಡಲಾಗುವುದು. ಸೆ. 13 ರಿಂದ ಚಿಕಿತ್ಸೆ ಪ್ರಾರಂಭವಾಗುತ್ತದೆ. ಆಯುರ್ವೇದ, ರೇಕಿ, ಪ್ರಾಣಿಕ್ ಹೀಲಿಂಗ್, ಧ್ಯಾನ ಮುಂತಾದ ವಿಧಾನಗಳ ಮೂಲಕ ಚಿಕಿತ್ಸೆ ನೀಡಲಾಗುವುದು. ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ: 5288630ನ್ನು ಸಂಪರ್ಕಿಸಬಹುದು.